ಎಂದವರೇ ಅವಸರವಸರವಾಗಿ ಕಾಫಿ ಕುಡಿದು ದೇಸಾಯರು ಸಂಭ್ರಮದಿಂದ ಪುಟಿದೆದ್ದು ಹೊರಗೆ ಬಂದು ಕಟ್ಟೆಯ ಮೇಲೆ ನಿಂತು ನೋಡಿದರೆ – ಆಗಲೇ ಮಳೆ ಶುರುವಾಗೇ ಬಿಟ್ಟಿದೆ!

'ಮಳೆ – ಮಳೆ ಅಂತ ಮೂರು ಹೊತ್ತೂ ಜಪ ಮಾಡ್ತಿದ್ರಲ್ಲಾ – ಬಂತು ನೋಡಿ' ಎಂದು ಅದೇ ಬಂದು ಜತೆಗೆ ನಿಂತ ಹೆಂಡತಿಯ ಕಡೆ ದೇಸಾಯರು ಮೆಚ್ಚುಗೆಯಿಂದ ನೋಡಿದರು. ಅವಳ ಮಾತು ಇಷ್ಟಕ್ಕೇ ಮುಗಿದಿರಲಿಲ್ಲ 'ನಿಮ್ಮ ಹೂವಿನ ಗಿಡಗಳು ಮಳೆ ಬಾರದೆ ಒಣಗಿ ಹೋಗ್ತಿವೆ ಅಂತ ವಿವಂಚನೆಗೊಳ್ತಾನೆ ಇದ್ರಿ. ಅಲ್ಲಿ ಪಾಪ, ಆ ಹುಡುಗಿ ವಿನತಾ ಪುಟ್ಟ ಮಗುವನ್ನೂ ಕಟ್ಟಿಕೊಂಡು ಒಬ್ಬಳೇ ಏನು ಮಾಡಬೇಕತ್ತು? ಜೀವಮಾನವಿಡೀ ಒಣಗಿ ಹೋಗುವ ಬದುಕನ್ನೇ ಬದುಕುತ್ತ ಸವೆದು ಹೋಗಬೇಕಾಗುತ್ತೆ? ಗಿಡಗಳ ಬಗ್ಗೆ ನಿಮಗಿರುವ ಸಂವೇದನೆ ಸೊಸೆಯ ಬಗ್ಗೆ ಏಕಿಲ್ಲ? ನನಗಂತೂ ಸರಿಯಾದ್ದನ್ನೇ ಮಾಡಿದಾನೆ ಅನ್ನಿಸುತ್ತೆ. ಅವಳ ಬರಡು ಬದುಕಿಗೆ ಮಳೆಯಾಗಿದ್ದಾನೆ. ನಿಧಿಗೆ ತಂದೆಯಾಗಿದ್ದಾನೆ. ತಾನೂ ಸಂತೋಷ ಕಂಡುಕೊಂಡಿದ್ದಾನೆ. ಸಾಕಲ್ಲ. ಇನ್ನೊಬ್ಬರನ್ನು ಪ್ರೀತಿಸೋದನ್ನು ನಾವಿನ್ನೂ ಕಲಿಯ ಬೇಕಾಗಿದೆ. ಕಲಿಯೋದಕ್ಕೆ ಯಾಕೆ ಸಂಕೋಚ?'

ದೇಸಾಯರು ಹಾಗೇ ತಲೆದೂಗಿದರು. ಸುಬ್ಬಣ್ಣನ ಕತೆ ಕೇಳಿಯೇ ಅರ್ಧ ಮೈ ಬೆಚ್ಚಗಾಗಿತ್ತು. ಈಗ ಹೆಂಡತಿಯೂ ಅದೇ ಧಾಟಿಯಲ್ಲಿದ್ದಾಳೆ. ವಿನತಾಗೀಗ ಅಂತಃಕರಣ, ಆತ್ಮೀಯತೆ ತೋರಿಸೋರು ಬೇಕಾಗಿದ್ದಾರೆ. ಅವನ್ನು ಕೊಡಲು ನಿಮ್ಮಿಂದ ಸಾಧ್ಯವಿದೆ! ಎನ್ನುವ ಹೆಂಡತಿಯ ಮಾತಿನಲ್ಲಿ ತಥ್ಯವಿಲ್ಲದೆ ಇಲ್ಲ. ಇನ್ನೊಂದೆಂದರೆ ಈಗಂತೂ ಇವಳು ಮಗನ ಜೊತೆಗೆ ಹೊರಡಲು ತುದಿಗಾಲಲ್ಲಿ ನಿಂತುಬಿಟ್ಟಿದ್ದಾಳೆ. ತಮ್ಮ ಮದುವೆಯಾಗಿ ಈ ಮೂವತ್ತೈದು ವರ್ಷಗಳಲ್ಲಿ ಒಂದು ದಿನವೂ ಅಗಲಿರದ ಅಪರೂಪದ ದಾಂಪತ್ಯ ತಮ್ಮದು. 'ಸಾವಿನಲ್ಲೂ ಜತೆಯಾಗಿರೋಣ' ಎಂದು ಒಪ್ಪಿಕೊಂಡೂ ಆಗಿತ್ತು. ಈ ಸಂದರ್ಭದಲ್ಲಿ ಇವಳನ್ನು ಬಿಟ್ಟು ತಾನೊಬ್ಬನೇ ಇರೋದು ಸಾಧ್ಯವೇ! ಇವಳೀಗ ಬದಲಾವಣೆಗೆ ಹೊಂದಿಕೊಳ್ಳುವ ಮನಸ್ಸು ಮಾಡಿರುವಾಗ – ಇವಳು ಹೇಳುವುದೆಲ್ಲ ಸತ್ಯ ಎಂದು ತಮ್ಮ ಮನಸ್ಸು ಸಮ್ಮತಿಸಿರುವಾಗ ತಾನೇಕೆ ಹಿಂಜರಿಯಬೇಕು!

'ಸರಿ ಮಾರಾಯ್ತಿ ಇಬ್ಬರೂ ಹೋಗೋಣ ನಡಿ' ದೇಸಾಯರು ಹೇಳಿ ಹೆಂಡತಿಯ ಕಡೆ ನೋಡಿ ಅವಳ ಮುಖದಲ್ಲಿ ಅರಳಿದ ಗೆಲುವಿನ ಮಂದಹಾಸದ ಜತೆ 'ನಾನೂ ಏನೂ ಸೋತಿಲ್ಲ' ಎಂಬಂತೆ ಕಿರುನಗೆ ಬೀರಿದರು.

## ರಾಮಚಂದ್ರ ಭಾವೆ

ಶಿವಮೊಗ್ಗ ಜಿಲ್ಲೆಯ ಸೊರಬ ರಾಮಚಂದ್ರ ಭಾವೆ ಅವರ ಊರು. ಅಂಚೆ ಇಲಾಖೆಯಲ್ಲಿ ಗದಗದಲ್ಲಿ 35 ವರ್ಷ ಸೇವೆ ಸಲ್ಲಿಸಿದ್ದಾರೆ. ಇಲ್ಲಿಯ ವರೆಗೆ ಅವರ 20 ಕಾದಂಬರಿಗಳು, ಐದು ಕಥಾ ಸಂಗ್ರಹಗಳು ಪ್ರಕಟವಾಗಿವೆ. 'ಅಂಧಪರ್ವ' ಕಾದಂಬರಿ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಪ್ರಸ್ತುತ ಮಹಾರಾಷ್ಟ್ರದ ರತ್ನಾಗಿರಿಯಲ್ಲಿ ವಾಸವಾಗಿದ್ದಾರೆ. ಭಾವೆ, ನಾಟಕಗಳನ್ನೂ ಬರೆದಿದ್ದಾರೆ. ಸುಮಾರು 250 ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಮಯೂರ' ಮಾಸಪತ್ರಿಕೆಯೊಂದರಲ್ಲೇ ಅವರ 25 ಕತೆಗಳು ಅಚ್ಚಾಗಿವೆ.